Re. No. D. 221

सत्यमेव जयते

# भारत का राजपत्र
# The Gazette of India
# ಭಾರತ ರಾಜ ಪತ್ರ

It contains the text of 10 Acts (Kannada

**( EXTRAORDINARY )**
( ವಿಶೇಷ ಸಂಚಿಕೆ )

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
**Published by Authority**
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | | |
|---|---|---|---|
| सं. १ | नई दिल्ली, सोमवार, नवेंबर १६, २००९ | कार्तीक २५, १९३१ (शका) | खंड. ४१ |
| No. 1 | New Delhi, Monday, November 16, 2009 | Karthika 25, 1931 (Saka) | Vol. 41 |
| ಸಂ. ೧ | ನವ ದೆಹಲಿ, ಸೋಮವಾರ, ನವೆಂಬರ್ ೧೬, ೨೦೦೯ | ಕಾರ್ತೀಕ ೨೫, ೧೯೩೧ (ಶಕ) | ಸಂಪುಟ. ೪೧ |


**Ministry of Law and Justice**
(Legislative Department)
New Delhi, 16th November, 2009

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 16ನೇ ನವೆಂಬರ್, 2009**

The Translation in Kannada of the following Acts, namely :- (1) The Petroleum Act, 1934 (2) The Election Commission (Conditions of Service of Election Commissioners and Transaction of Business) Act, 1991 (3) The National Commission for Backward Classes Act, 1993 (4) The Lotteries (Regulation) Act, 1998 (5) The Advocates' Welfare Fund Act, 2001 (6) The Indian Council of World Affairs Act, 2001 (7) The Delimitation Act, 2002 (8) The Cigarettes and Other Tobacco Products (Prohibition of Advertisement and Regulation of Trade and Commerce, Production, Supply and Distribution) Act, 2003 (9) The Protection of Women from Domestic Violence Act, 2005 (10) The Prohibition of Child Marriage Act, 2006 - are hereby published under the authority of the President and shall be deemed to be authoritative texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ :- (1) ಪೆಟ್ರೋಲಿಯಂ ಅಧಿನಿಯಮ, 1934 (2) ಚುನಾವಣಾ ಆಯೋಗ (ಚುನಾವಣಾ ಆಯುಕ್ತರುಗಳ ಸೇವಾ ಷರತ್ತುಗಳು ಮತ್ತು ವ್ಯವಹಾರ ನಿರ್ವಹಣೆ) ಅಧಿನಿಯಮ, 1991 (3) ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1993 (4) ಲಾಟರಿಗಳ (ವಿನಿಯಮನ) ಅಧಿನಿಯಮ, 1998 (5) ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 2001 (6) ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು ಅಧಿನಿಯಮ, 2001 (7) ಸೀಮಾ ನಿರ್ಣಯ ಅಧಿನಿಯಮ, 2002 (8) ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ (ಜಾಹೀರಾತು ನಿಷೇಧ ಮತ್ತು ವ್ಯಾಪಾರ ಮತ್ತು ವಾಣಿಜ್ಯ, ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮನ) ಅಧಿನಿಯಮ, 2003 (9) ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 (10) ಬಾಲ್ಯ ವಿವಾಹ ನಿಷೇಧ ಅಧಿನಿಯಮ, 2006 – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು ಅಧಿನಿಯಮ, 2001

## (2001ರ ಅಧಿನಿಯಮ ಸಂಖ್ಯೆ 29)

[ಸೆಪ್ಟೆಂಬರ್ 3, 2001]

**ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತನ್ನು ರಾಷ್ಟ್ರೀಯ ಮಹತ್ವದ ಸಂಸ್ಥೆಯನ್ನಾಗಿ ಘೋಷಿಸುವ ಮತ್ತು ಅದರ ನಿಗಮನಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಉಪಬಂಧಿಸುವ ಅಧಿನಿಯಮ.**

ಭಾರತ ಗಣರಾಜ್ಯದ ಐವತ್ತೆರಡನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಗಿನಂತೆ ಅಧಿನಿಯಮಿತವಾಗತಕ್ಕದ್ದು:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು ಅಧಿನಿಯಮ, 2001 ಎಂದು ಕರೆಯತಕ್ಕದ್ದು.

(2) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಇದು ಸೆಪ್ಟಂಬರ್ 1, 2000ದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. **ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತನ್ನು ರಾಷ್ಟ್ರೀಯ ಮಹತ್ವದ ಸಂಸ್ಥೆಯೆಂದು ಘೋಷಿಸುವುದು.**- ಸೊಸೈಟಿಗಳ ನೋಂದಣಿ ಅಧಿನಿಯಮ, 1860 (1860ರ 21)ರ ಮೇರೆಗೆ ನೋಂದಣಿಯಾದ ಸೊಸೈಟಿಯಾಗಿರುವ ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತಿನ ಧ್ಯೇಯೋದ್ದೇಶಗಳು ಒಂದು ರಾಷ್ಟ್ರೀಯ ಮಹತ್ವದ ಸಂಸ್ಥೆಯನ್ನು ರೂಪಿಸುವಂಥವಾಗಿರುವುದರಿಂದ ಈ ಸಂಸ್ಥೆಯನ್ನು ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು ಎಂದು ಕರೆಯಲಾಗುವ ಒಂದು ರಾಷ್ಟ್ರೀಯ ಮಹತ್ವದ ಸಂಸ್ಥೆಯೆಂದು ಈ ಮೂಲಕ ಘೋಷಿಸಲಾಗಿದೆ.

3. **ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಗೊತ್ತುಪಡಿಸಲಾದ ದಿನ" ಎಂದರೆ ಈ ಅಧಿನಿಯಮದ ಪ್ರಾರಂಭದ ದಿನಾಂಕ ಎಂದು ಅರ್ಥ;

(ಬಿ) "ಸಭಾಪತಿ" ಎಂದರೆ ಆಡಳಿತ ಮಂಡಲಿಯ ಸಭಾಪತಿ ಎಂದು ಅರ್ಥ;

(ಸಿ) "ಪರಿಷತ್ತು" ಎಂದರೆ 4ನೇ ಪ್ರಕರಣದ ಮೇರೆಗೆ ನಿಗಮಿತವಾದ ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು ಎಂದು ಅರ್ಥ;

(ಡಿ) "ಮಹಾನಿರ್ದೇಶಕ" ಎಂದರೆ ಪರಿಷತ್ತಿನ ಮಹಾನಿರ್ದೇಶಕ ಎಂದು ಅರ್ಥ;

(ಇ) "ಅಸ್ತಿತ್ವದಲ್ಲಿರುವ ಪರಿಷತ್ತು" ಎಂದರೆ ಸೊಸೈಟಿಗಳ ನೋಂದಣಿ ಅಧಿನಿಯಮ, 1860ರ (1860ರ 21) ಮೇರೆಗೆ ನೋಂದಾಯಿತವಾದ ಒಂದು ಸೊಸೈಟಿಯಾಗಿರುವ ಮತ್ತು ಗೊತ್ತುಪಡಿಸಿದ ದಿನದ ನಿಕಟಪೂರ್ವದಲ್ಲಿ ಅಂಥ ಕಾರ್ಯ ನಡೆಸುತ್ತಿರುವ ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು ಎಂದು ಅರ್ಥ;

(ಎಫ್) "ನಿಧಿ" ಎಂದರೆ 18ನೇ ಪ್ರಕರಣದಲ್ಲಿ ಉಲ್ಲೇಖಿತವಾದ ಪರಿಷತ್ತಿನ ನಿಧಿ ಎಂದು ಅರ್ಥ;

(ಜಿ) "ಆಡಳಿತ ಮಂಡಳಿ" ಎಂದರೆ ಪರಿಷತ್ತಿನ ಆಡಳಿತ ಮಂಡಲಿ ಎಂದು ಅರ್ಥ;

(ಹೆಚ್) "ಸದಸ್ಯ" ಎಂದರೆ ಪರಿಷತ್ತಿನ ಸದಸ್ಯ ಎಂದು ಅರ್ಥ ಮತ್ತು ಅದು ಅಧ್ಯಕ್ಷನನ್ನು ಹಾಗೂ ಉಪಾಧ್ಯಕ್ಷನನ್ನು ಒಳಗೊಳ್ಳುತ್ತದೆ;

(ಐ) "ಅಧ್ಯಕ್ಷ" ಎಂದರೆ ಪರಿಷತ್ತಿನ ಅಧ್ಯಕ್ಷ ಎಂದು ಅರ್ಥ;

(ಜೆ) "ವಿನಿಯಮನಗಳು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ವಿನಿಯಮನಗಳು ಎಂದು ಅರ್ಥ;

(ಕೆ) "ನಿಯಮಗಳು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳು ಎಂದು ಅರ್ಥ;

(ಎಲ್) "ಉಪಾಧ್ಯಕ್ಷರುಗಳು" ಎಂದರೆ ಪರಿಷತ್ತಿನ ಉಪಾಧ್ಯಕ್ಷರುಗಳು ಎಂದು ಅರ್ಥ.

**4. ಪರಿಷತ್ತನ್ನು ನಿಗಮನಗೊಳಿಸುವುದು.–** (1) ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು, ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು ಎಂಬ ಹೆಸರಿನ ನಿಗಮಿತ ನಿಕಾಯವಾಗಿ ಈ ಮೂಲಕ ರಚಿತವಾಗಿದೆ ಮತ್ತು ಅಂತಹ ನಿಗಮಿತ ನಿಕಾಯವು, ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಸ್ಥಿರ ಮತ್ತು ಚರಾಸ್ತಿಗಳನ್ನು ಆರ್ಜಿಸುವ, ಹೊಂದುವ ಮತ್ತು ವಿಲೆ ಮಾಡುವ ಮತ್ತು ಕರಾರನ್ನು ಮಾಡಿಕೊಳ್ಳುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮುದ್ರೆಯನ್ನು ಹೊಂದಿರತಕ್ಕದ್ದು ಮತ್ತು ಪರಿಷತ್ತಿನ ಹೆಸರಿನಲ್ಲಿ ದಾವೆಯನ್ನು ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(2) ಪರಿಷತ್ತಿನ ಕೇಂದ್ರ ಕಚೇರಿಯು ದೆಹಲಿಯಲ್ಲಿರತಕ್ಕದ್ದು ಮತ್ತು ಪರಿಷತ್ತು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಭಾರತದ ಇತರ ಸ್ಥಳಗಳಲ್ಲಿ ಶಾಖೆಗಳನ್ನು ಸ್ಥಾಪಿಸಬಹುದು.

**5. ಅಸ್ತಿತ್ವದಲ್ಲಿರುವ ಪರಿಷತ್ತಿನ ಆಸ್ತಿಗಳನ್ನು ಮತ್ತು ಹೊಣೆಗಾರಿಕೆಗಳನ್ನು ಪರಿಷತ್ತಿಗೆ ವರ್ಗಾಯಿಸುವುದು.–** (1) ಗೊತ್ತುಪಡಿಸಿದ ದಿನದಂದು ಅಥವಾ ದಿನದಿಂದ,–

(ಎ) ಅಸ್ತಿತ್ವದಲ್ಲಿರುವ ಪರಿಷತ್ತಿನಲ್ಲಿ ಆ ದಿನದ ನಿಕಟಪೂರ್ವದಲ್ಲಿ ನಿಹಿತಗೊಂಡಿದ್ದ ಎಲ್ಲಾ ಆಸ್ತಿಗಳು ಮತ್ತು ಇತರ ಸ್ವತ್ತುಗಳು ಪರಿಷತ್ತಿನಲ್ಲಿ ನಿಹಿತವಾಗತಕ್ಕದ್ದು;

(ಬಿ) ಅಸ್ತಿತ್ವದಲ್ಲಿರುವ ಪರಿಷತ್ತಿನ ಉದ್ದೇಶಗಳಿಗಾಗಿ ಅಥವಾ ಆ ಉದ್ದೇಶಗಳಿಗೆ ಸಂಬಂಧಿಸಿದಂತೆ ಆ ದಿನದ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ, ಪರಿಷತ್ತು ಭರಿಸಿದ ಎಲ್ಲ ಋಣಗಳನ್ನು, ಬಾಧ್ಯತೆಗಳನ್ನು ಮತ್ತು ಹೊಣೆಗಾರಿಕೆಗಳನ್ನು ಮಾಡಿಕೊಂಡ ಎಲ್ಲ ಕರಾರುಗಳನ್ನು ಮತ್ತು ಮಾಡಲು ತೊಡಗಿರುವ ಎಲ್ಲ ವಿಷಯಗಳನ್ನು ಮತ್ತು ಸಂಗತಿಗಳನ್ನು ಪರಿಷತ್ತು ಭರಿಸಿದೆಯೆಂದು, ಪರಿಷತ್ತಿನೊಂದಿಗೆ ಅಥವಾ ಪರಿಷತ್ತಿಗಾಗಿ ಮಾಡತೊಡಗಿದವುಗಳೆಂದು ಭಾವಿಸತಕ್ಕದ್ದು.

(ಸಿ) ಅಸ್ತಿತ್ವದಲ್ಲಿರುವ ಪರಿಷತ್ತಿಗೆ ಆ ದಿನದ ನಿಕಟಪೂರ್ವದಲ್ಲಿ ಬರಬೇಕಾಗಿದ್ದ ಹಣದ ಎಲ್ಲಾ ಮೊತ್ತಗಳನ್ನು ಪರಿಷತ್ತಿಗೆ ಬರಬೇಕಾದುದೆಂದು ಭಾವಿಸತಕ್ಕದ್ದು;

(ಡಿ) ಅಸ್ತಿತ್ವದಲ್ಲಿರುವ ಪರಿಷತ್ತು ಅಥವಾ ಪರಿಷತ್ತಿನ ವಿರುದ್ಧ ಆ ದಿನದ ನಿಕಟಪೂರ್ವದಲ್ಲಿ, ಹೂಡಿರುವ ಅಥವಾ ಹೂಡಬಹುದಾಗಿದ್ದ ಎಲ್ಲಾ ದಾವೆಗಳನ್ನು ಮತ್ತು ಇತರ ಕಾನೂನು ಸಮ್ಮತ ವ್ಯವಹರಣೆಗಳನ್ನು, ಪರಿಷತ್ತು ಅಥವಾ ಪರಿಷತ್ತಿನ ವಿರುದ್ಧ ಮುಂದುವರಿಸಬಹುದು ಅಥವಾ ಹೂಡಬಹುದು; ಮತ್ತು

(ಇ) ಆ ದಿನದ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿರುವ ಪರಿಷತ್ತಿನ ಅಧೀನದಲ್ಲಿ ಯಾವುದೇ ಪದವನ್ನು ಧಾರಣ ಮಾಡಿರುವ ಪ್ರತಿಯೊಬ್ಬ ನೌಕರನು, ಆ ದಿನದಂದು, ಆತನಿಗೆ ಗ್ರಾಹ್ಯವಾಗಿದ್ದ ನಿವೃತ್ತಿ ವೇತನಕ್ಕೆ, ಉಪದಾನಕ್ಕೆ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದಂತೆ ಅಂತಹುದೇ ಹಕ್ಕುಗಳು ಮತ್ತು ವಿಶೇಷ ಸವಲತ್ತುಗಳೊಂದಿಗೆ, ಅಂತಹ ಹಕ್ಕುಗಳು ಮತ್ತು ವಿಶೇಷ ಸವಲತ್ತುಗಳು ನಿಹಿತವಾಗಿಲ್ಲದಿದ್ದರೆ ಹೇಗೋ ಹಾಗೆ, ಪರಿಷತ್ತಿನ ಅಧೀನದಲ್ಲಿ ಆತನು ಪದವನ್ನು ಅಥವಾ ಸೇವೆಯನ್ನು ಹೊಂದಿರತಕ್ಕದ್ದು; ಮತ್ತು ಪರಿಷತ್ತಿನ ಅಧೀನದಲ್ಲಿನ ಆತನ ನೇಮಕವು ಕ್ರಮಬದ್ಧವಾಗಿ ಕೊನೆಗೊಳ್ಳದ ಹೊರತು ಮತ್ತು ಕೊನೆಗೊಳ್ಳುವವರೆಗೆ ಅಥವಾ ಆತನ ಪರಿಶ್ರಮಧನವು ಮತ್ತು ಇತರ ಸೇವಾ ಷರತ್ತುಗಳು ಪರಿಷತ್ತಿನಿಂದ ಕ್ರಮಬದ್ಧವಾಗಿ ವ್ಯತ್ಯಾಸವಾಗುವವರೆಗೆ ಪದವನ್ನು ಹೊಂದಿರುವುದನ್ನು ಮುಂದುವರಿಸತಕ್ಕದ್ದು.

(2) ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಪ್ರಕರಣದ ಮೇರೆಗೆ ಪರಿಷತ್ತು ತನ್ನ ನಿಯತ ಸೇವೆಯಲ್ಲಿ, ಯಾರೇ ನೌಕರನನ್ನು ವಿಲೀನಗೊಳಿಸುವಿಕೆಯು, ಆ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ಅಂತಹ ನೌಕರನು ಆ ಯಾವುದೇ ನಷ್ಟ ಪರಿಹಾರಕ್ಕೆ ಹಕ್ಕುಳ್ಳವನಾಗತಕ್ಕದ್ದಲ್ಲ ಮತ್ತು ಯಾವುದೇ ನ್ಯಾಯಾಲಯವು, ನ್ಯಾಯಾಧಿಕರಣವು ಅಥವಾ ಇತರ ಪ್ರಾಧಿಕಾರವು ಅಂತಹ ಕ್ಲೇಮನ್ನು ಪುರಸ್ಕರಿಸತಕ್ಕದ್ದಲ್ಲ.

6. **ಆಸ್ತಿ ಅಥವಾ ಸ್ವತ್ತುಗಳನ್ನು ವರ್ಗಾವಣೆ ಮಾಡಲು ಬಾಧ್ಯತೆ.**– (1) 5ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿತವಾದ ಆಸ್ತಿಗಳ ಮತ್ತು ಇತರ ಸ್ವತ್ತುಗಳ ಭಾಗವಾಗಿರುವ ಆಸ್ತಿಯ ಸ್ವಾಧೀನವನ್ನು, ಅಭಿರಕ್ಷೆಯನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ಅಂತಹ ಆಸ್ತಿಯನ್ನು ತಕ್ಷಣವೇ ಮಹಾನಿರ್ದೇಶಕನ ವಶಕ್ಕೆ ಒಪ್ಪಿಸತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಪರಿಷತ್ತಿನ ಆಸ್ತಿಯ ಮತ್ತು ಇತರ ಸ್ವತ್ತುಗಳ ಪ್ರಭಾರ ಹೊಂದಿರುವ ಯಾವನೇ ವ್ಯಕ್ತಿಯು, ಆ ದಿನದಿಂದ ಹತ್ತು ದಿನಗಳೊಳಗೆ, ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿದ್ದ ಎಲ್ಲಾ ಆಸ್ತಿಗಳ ಮತ್ತು ಸ್ವತ್ತುಗಳ (ಪುಸ್ತಕ ಋಣಗಳು ಮತ್ತು ಹೂಡಿಕೆಗಳು ಮತ್ತು ಸ್ವಂತ ಸಾಮಾನುಗಳ ವಿವರಗಳೂ ಸೇರಿ) ಸಂಪೂರ್ಣ ತಪಶೀಲು ಪಟ್ಟಿಯನ್ನು ಮತ್ತು ಅಸ್ತಿತ್ವದಲ್ಲಿರುವ ಪರಿಷತ್ತು ಅಥವಾ ಅದರ ಪರವಾಗಿ ಯಾರೇ ವ್ಯಕ್ತಿಯು ಮಾಡಿಕೊಂಡ ಎಲ್ಲಾ ಒಪ್ಪಂದಗಳನ್ನು ಸಹ ಮಹಾನಿರ್ದೇಶಕನಿಗೆ ಒದಗಿಸತಕ್ಕದ್ದು.

7. **ಪರಿಷತ್ತಿನ ರಚನೆ.**– (1) ಸೆಪ್ಟಂಬರ್ 1, 2001ರಂದು ಅಥವಾ ಆ ದಿನದಿಂದ ಮತ್ತು (2)ನೇ ಉಪಪ್ರಕರಣದ ಮೇರೆಗೆ ದಿನಾಂಕವನ್ನು ಗೊತ್ತುಪಡಿಸುವವರೆಗೆ, ಪರಿಷತ್ತು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಭಾರತದ ಉಪರಾಷ್ಟ್ರಪತಿ, ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು;

(ಬಿ) ಭಾರತದ ಪ್ರಧಾನಮಂತ್ರಿ;

(ಸಿ) ಲೋಕಸಭಾಧ್ಯಕ್ಷ;

(ಡಿ) ರಾಜ್ಯ ಸಭೆಯಲ್ಲಿನ ಸದನದ ನಾಯಕ;

(ಇ) ಲೋಕಸಭೆಯಲ್ಲಿನ ವಿರೋಧ ಪಕ್ಷದ ನಾಯಕ;

(ಎಫ್) ರಾಜ್ಯಸಭೆಯಲ್ಲಿನ ವಿರೋಧ ಪಕ್ಷದ ನಾಯಕ.

(2) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂತಹ ದಿನಾಂಕದಂದು ಮತ್ತು ದಿನಾಂಕದಿಂದ, ಪರಿಷತ್ತು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಭಾರತದ ಉಪರಾಷ್ಟ್ರಪತಿ, ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು;

(ಬಿ) (1)ನೇ ಉಪಪ್ರಕರಣದ ಮೇರೆಗೆ ರಚಿಸಲಾದ ಪರಿಷತ್ತು ಮೊದಲ ಬಾರಿಗೆ ಮತ್ತು ಈ ಉಪಪ್ರಕರಣದ ಮೇರೆಗೆ ರಚಿಸಲಾದ ಪರಿಷತ್ತು ಆ ತರುವಾಯ ನಾಮನಿರ್ದೇಶನ ಮಾಡಬಹುದಾದ ಮೂವರು ಉಪಾಧ್ಯಕ್ಷರು;

(ಸಿ) ಮಹಾ ನಿರ್ದೇಶಕ, ಪದನಿಮಿತ್ತ ಸದಸ್ಯ ಕಾರ್ಯದರ್ಶಿ;

(ಡಿ) ಲೋಕಸಭಾಧ್ಯಕ್ಷನು ನಾಮನಿರ್ದೇಶಿಸಬೇಕಾದ ಲೋಕಸಭೆಯ ಐವರು ಸದಸ್ಯರು ಮತ್ತು ರಾಜ್ಯಸಭೆಯ ಸಭಾಪತಿಯು ನಾಮನಿರ್ದೇಶಿಸಬೇಕಾದ ರಾಜ್ಯಸಭೆಯ ಮೂವರು ಸದಸ್ಯರು;

(ಇ) (1)ನೇ ಉಪಪ್ರಕರಣದ ಮೇರೆಗೆ ರಚಿಸಲಾದ ಪರಿಷತ್ತು ಮೊದಲ ಬಾರಿಗೆ ಮತ್ತು ಈ ಉಪಪ್ರಕರಣದ ಮೇರೆಗೆ ರಚಿಸಲಾದ ಪರಿಷತ್ತು ಆ ತರುವಾಯ ನಾಮನಿರ್ದೇಶಿಸಬೇಕಾದ ರಾಜತಾಂತ್ರಿಕತೆ, ಅಂತಾರಾಷ್ಟ್ರೀಯ ವ್ಯವಹಾರಗಳು, ಅಂತಾರಾಷ್ಟ್ರೀಯ ಕಾನೂನು, ಬಹುಪಕ್ಷೀಯ ಅಥವಾ ವಿಶ್ವಸಂಸ್ಥೆಯ ವ್ಯವಹಾರಗಳು, ಭದ್ರತೆ ಮತ್ತು ನಿಶ್ಯಸ್ತ್ರೀಕರಣ – ಈ ಕ್ಷೇತ್ರಗಳಲ್ಲಿ ಪರಿಣತಿಯನ್ನು ಹೊಂದಿರುವ ಏಳು ಜನ ಸದಸ್ಯರು;

(ಎಫ್) (1)ನೇ ಉಪಪ್ರಕರಣದ ಮೇರೆಗೆ ರಚಿಸಲಾದ ಪರಿಷತ್ತು ಮೊದಲ ಬಾರಿಗೆ ಮತ್ತು ಈ ಉಪಪ್ರಕರಣದ ಮೇರೆಗೆ ರಚಿಸಲಾದ ಪರಿಷತ್ತು ಆ ತರುವಾಯ ನಾಮನಿರ್ದೇಶಿಸಬೇಕಾದ ಇತಿಹಾಸ, ಅರ್ಥಶಾಸ್ತ್ರ ಮತ್ತು ಇತರ ಸಮಾಜ

ವಿಜ್ಞಾನ ಕ್ಷೇತ್ರಗಳಲ್ಲಿ ತಜ್ಞರಾಗಿರುವವರ ಪೈಕಿ ವಿಶ್ವವಿದ್ಯಾನಿಲಯಗಳ ಅಥವಾ ಉನ್ನತ ಶಿಕ್ಷಣದ ಸಂಶೋಧನಾ ಸಂಸ್ಥೆಗಳ ಪ್ರತಿನಿಧಿಗಳಾಗಿರುವ, ಏಳು ಜನ ಸದಸ್ಯರು, ಇವರಲ್ಲಿ ಕನಿಷ್ಠ ಇಬ್ಬರು ಉಪಕುಲಪತಿಗಳಾಗಿರತಕ್ಕದ್ದು;

(ಜಿ) ಪರಿಷತ್ತಿನ ಆಡಳಿತ ಮಂಡಲಿಯು ನಾಮನಿರ್ದೇಶಿಸಬೇಕಾದ ಮಾಧ್ಯಮ ವ್ಯಕ್ತಿಗಳಾಗಿರುವ ಅಥವಾ ಭಾರತ ಅಂತಾರಾಷ್ಟ್ರೀಯ ಕೇಂದ್ರ, ರಾಜ್ಯನೀತಿ ಸಂಶೋಧನಾ ಕೇಂದ್ರ, ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಪರಿಷತ್ತು, ರಕ್ಷಣಾ ಅಧ್ಯಯನ ಮತ್ತು ವಿಶ್ಲೇಷಣಾ ಸಂಸ್ಥೆ, ಸಾಂಸ್ಕೃತಿಕ ಸಂಬಂಧಗಳ ಭಾರತೀಯ ಪರಿಷತ್ತು, ಮುಂತಾದ ಸಂಘಟನೆಗಳಿಗೆ ಸೇರಿದ ವ್ಯಕ್ತಿಗಳಾಗಿರುವ ಮತ್ತು ಪರಿಷತ್ತಿನ ಕಾರ್ಯಗಳಲ್ಲಿ ಮತ್ತು ಉದ್ದೇಶಗಳಲ್ಲಿ ಆಸಕ್ತಿ ಹೊಂದಿರುವ ಏಳು ಜನ ಸದಸ್ಯರು;

(ಹೆಚ್) ಪರಿಷತ್ತಿನ ಆಡಳಿತ ಮಂಡಲಿಯು ನಾಮನಿರ್ದೇಶಿಸಬೇಕಾದ, ವ್ಯವಹಾರ ಕ್ಷೇತ್ರದಿಂದ ಅಥವಾ ವಾಣಿಜ್ಯ ಮಂಡಲಿಯ, ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟದ, ಭಾರತೀಯ ಕೈಗಾರಿಕಾ ಮಹಾ ಒಕ್ಕೂಟದ, ಭಾರತದ ವಾಣಿಜ್ಯ ಮತ್ತು ಕೈಗಾರಿಕಾ ಸಹವರ್ತಿ ಒಕ್ಕೂಟಗಳ, ಭಾರತೀಯ ರಫ್ತು ಸಂಸ್ಥೆಗಳ ಒಕ್ಕೂಟದ ಪ್ರತಿನಿಧಿಗಳಾಗಿರುವ ಐವರು ಸದಸ್ಯರು;

(ಐ) ವಿದೇಶ ವ್ಯವಹಾರಗಳ ಸಚಿವಾಲಯದ ಮೂವರು ಸದಸ್ಯರು, [ವಿದೇಶಾಂಗ ಕಾರ್ಯದರ್ಶಿ, ಹಣಕಾಸು ಸಲಹೆಗಾರ ಮತ್ತು ಡೀನ್ (ವಿದೇಶಿ ಸೇವಾ ಸಂಸ್ಥೆ)] ಪದನಿಮಿತ್ತ;

(ಜೆ) ಶಿಕ್ಷಣ, ಸಂಸ್ಕೃತಿ, ನಗರಾಭಿವೃದ್ಧಿ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ರಕ್ಷಣಾ ಖಾತೆಯಲ್ಲಿ ವ್ಯವಹರಿಸುವ ಕೇಂದ್ರ ಸರ್ಕಾರದ ಮಂತ್ರಾಲಯಗಳನ್ನು ಅನುಕ್ರಮವಾಗಿ ಪ್ರತಿನಿಧಿಸುವುದಕ್ಕೆ ಕೇಂದ್ರ ಸರ್ಕಾರವು ನಾಮನಿರ್ದೇಶಿಸಬೇಕಾದ ಐವರು ಪದನಿಮಿತ್ತ ಸದಸ್ಯರು.

(3) ಪರಿಷತ್ತಿನ ಸದಸ್ಯ ಸ್ಥಾನವು, ಅದನ್ನು ಧಾರಣ ಮಾಡಿರುವವನನ್ನು ಸಂಸತ್ತಿನ ಯಾವುದೇ ಸದನದ ಸದಸ್ಯನಾಗಿ ಆಯ್ಕೆಯಾಗಲು ಅಥವಾ ಸದಸ್ಯನಾಗಿರುವುದಕ್ಕೆ, ಆತನನ್ನು ಅನರ್ಹಗೊಳಿಸತಕ್ಕದ್ದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

(4) ಒಬ್ಬ ವ್ಯಕ್ತಿಯು,-

(ಎ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ, ಅವನು ನೈತಿಕ ಅಧಃಪತನವನ್ನು ಒಳಗೊಳ್ಳುವ ಅಪರಾಧಕ್ಕಾಗಿ ತಪ್ಪಿತಸ್ಥನೆಂದು ನಿರ್ಣೀತನಾಗಿದ್ದರೆ ಮತ್ತು ಕಾರಾವಾಸ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಬಿ) ಅವನು ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಸಿ) ಅವನು ಅಸ್ವಸ್ಥ ಮನಸ್ಸಿನವನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯವು ಹಾಗೆಂದು ಘೋಷಿಸಿದ್ದರೆ

- ಅವನು ಸದಸ್ಯನಾಗಿ ನಾಮನಿರ್ದೇಶಿತನಾಗಲು ಅಥವಾ ಆಯ್ಕೆಯಾಗಲು ಅನರ್ಹನಾಗಿರತಕ್ಕದ್ದು.

**8. ಸದಸ್ಯರ ಪದಾವಧಿ ಮತ್ತು ಖಾಲಿಸ್ಥಾನಗಳು.-** (1) ಈ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಸದಸ್ಯನ ಪದಾವಧಿಯು ಆತನ ನಾಮನಿರ್ದೇಶನದ ದಿನಾಂಕದಿಂದ ಮೂರು ವರ್ಷಗಳಾಗಿರತಕ್ಕದ್ದು.

(2) ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿಮಾಡಲು ನಾಮನಿರ್ದೇಶನಗೊಳ್ಳುವ ಸದಸ್ಯನ ಪದಾವಧಿಯು, ಯಾವ ಸದಸ್ಯನ ಸ್ಥಾನಕ್ಕೆ ಆತನನ್ನು ನಾಮನಿರ್ದೇಶನ ಮಾಡಲಾಗಿದೆಯೋ ಆ ಸದಸ್ಯನ ಉಳಿದ ಪದಾವಧಿಯವರೆಗೆ ಮುಂದುವರಿಯತಕ್ಕದ್ದು.

(3) ಸದಸ್ಯನು, ಕೇಂದ್ರ ಸರ್ಕಾರವು ಅನ್ಯಥಾ ನಿರ್ದೇಶಿಸಿದ ಹೊರತು, ತನ್ನ ಸ್ಥಾನಕ್ಕೆ ಮತ್ತೊಬ್ಬ ವ್ಯಕ್ತಿಯು ಸದಸ್ಯನಾಗಿ ನಾಮನಿರ್ದೇಶಿತನಾಗುವವರೆಗೆ ಆ ಪದದಲ್ಲಿ ಮುಂದುವರಿಯತಕ್ಕದ್ದು.

(4) ಕೇಂದ್ರ ಸರ್ಕಾರವು ಸದಸ್ಯನನ್ನು,-

(ಎ) 7ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ನಮೂದಿಸಿದ ಯಾವುದೇ ಅನರ್ಹತೆಗಳನ್ನು ಆತನು ಹೊಂದಿದ್ದರೆ;

(ಬಿ) ಆತನು ಕಾರ್ಯನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯನಿರ್ವಹಿಸಲು ಅಸಮರ್ಥನಾಗಿದ್ದರೆ; ಅಥವಾ

(ಸಿ) ಪರಿಷತ್ತಿನಿಂದ ಅನುಮತಿ ಪಡೆಯದೆ, ಪರಿಷತ್ತಿನ ಒಂದಾದ ಮೇಲೊಂದರಂತೆ ಬರುವ ಮೂರು ಸಭೆಗಳಿಗೆ ಗೈರು ಹಾಜರಾದರೆ; ಅಥವಾ

(ಡಿ) ಆತನು ತನ್ನ ಪದವನ್ನು ಎಷ್ಟರಮಟ್ಟಿಗೆ ದುರುಪಯೋಗಪಡಿಸಿಕೊಂಡಿದ್ದಾನೆಂದರೆ ಆತನನ್ನು ಆ ಪದದಲ್ಲಿ ಮುಂದುವರಿಸುವುದು ಸಾರ್ವಜನಿಕ ಹಿತಾಸಕ್ತಿಗೆ ಬಾಧಕವಾಗುತ್ತದೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ

– ತೆಗೆದುಹಾಕತಕ್ಕದ್ದು:

ಪರಂತು, ಈ ವಿಷಯದ ಬಗ್ಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಸದಸ್ಯನಿಗೆ ಒಂದು ಸೂಕ್ತ ಅವಕಾಶವನ್ನು ನೀಡಿದ ಹೊರತು, ಈ ಖಂಡದ ಮೇರೆಗೆ ಯಾರೇ ಸದಸ್ಯನನ್ನು ತೆಗೆದುಹಾಕತಕ್ಕದ್ದಲ್ಲ.

(5) ಸದಸ್ಯನು, 7ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಅನರ್ಹನಾಗಿರದ ಹೊರತು, ಮರುನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದು.

(6) ಸದಸ್ಯನು, ಕೇಂದ್ರ ಸರ್ಕಾರಕ್ಕೆ ತಾನು ಸಹಿ ಮಾಡಿದ ಬರಹದ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು, ಆದರೆ, ಆ ಸರ್ಕಾರವು ಆತನ ರಾಜೀನಾಮೆಯನ್ನು ಅಂಗೀಕರಿಸುವವರೆಗೆ ಆತನು ತನ್ನ ಪದದಲ್ಲಿ ಮುಂದುವರಿಯತಕ್ಕದ್ದು.

(7) ಸದಸ್ಯರೊಳಗೆ ಖಾಲಿಸ್ಥಾನಗಳನ್ನು ಭರ್ತಿಮಾಡುವ ರೀತಿಯು ನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

9. **ಅಧ್ಯಕ್ಷನ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** ಅಧ್ಯಕ್ಷನು, ಈ ಅಧಿನಿಯಮದಲ್ಲಿ ವಿಧಿಸಬಹುದಾದಂಥ ಅಥವಾ ನಿಯಮಗಳ ಮೂಲಕ ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

10. **ಉಪಾಧ್ಯಕ್ಷರುಗಳ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** ಉಪಾಧ್ಯಕ್ಷರುಗಳು, ನಿಯಮಗಳಲ್ಲಿ ನಿಯಮಿಸಬಹುದಾದಂಥ ಅಥವಾ ಅಧ್ಯಕ್ಷನು ಅವನಿಗೆ ಪ್ರತ್ಯಾಯೋಜಿಸಬಹುದಾದಂಥ ಅಧ್ಯಕ್ಷನ ಅಂತಹ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

11. **ಸದಸ್ಯರ ಭತ್ಯೆಗಳು.–**ನಿಯಮಗಳ ಮೂಲಕ ನಿಯಮಿಸಬಹುದಾದಂಥ ಭತ್ಯೆಗಳು ಯಾವುದಾದರೂ ಇದ್ದರೆ, ಅವುಗಳನ್ನು ಸದಸ್ಯರು ಪರಿಷತ್ತಿನಿಂದ ಸ್ವೀಕರಿಸತಕ್ಕದ್ದು.

12. **ಪರಿಷತ್ತಿನ ಸಭೆಗಳು.–** ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂತಹ ಕಾಲದಲ್ಲಿ ಮತ್ತು ಸ್ಥಳದಲ್ಲಿ ಪರಿಷತ್ತು ತನ್ನ ಮೊದಲ ಸಭೆಯನ್ನು ನಡೆಸತಕ್ಕದ್ದು ಮತ್ತು ಆ ಸರ್ಕಾರವು ವಿಧಿಸಬಹುದಾದಂತೆ ಮೊದಲ ಸಭೆಯಲ್ಲಿ ಕಾರ್ಯಕಲಾಪಗಳ ನಿರ್ವಹಣೆಗೆ ಸಂಬಂಧಿಸಿದ ಅಂತಹ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು ಮತ್ತು ತದನಂತರ ಪರಿಷತ್ತು, ವಿನಿಯಮನಗಳ ಮೂಲಕ ನಿಯಮಿಸಬಹುದಾದಂಥ ಕಾಲಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ತನ್ನ ಸಭೆಗಳಲ್ಲಿ ಕಾರ್ಯಕಲಾಪಗಳ ನಿರ್ವಹಣೆಗೆ ಸಂಬಂಧಿಸಿದ ಅಂತಹ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

13. **ಪರಿಷತ್ತಿನ ಉದ್ದೇಶಗಳು.–** (ಎ) ಅಂತರ ರಾಷ್ಟ್ರೀಯ ವಿಷಯಗಳ ಮೇಲಿನ ತಿಳಿವಳಿಕೆ ಆಧಾರಿತ ಅಭಿಪ್ರಾಯದ ಒಂದು ನಿಕಾಯವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಭಾರತೀಯ ಮತ್ತು ಅಂತರರಾಷ್ಟ್ರೀಯ ವಿಷಯಗಳ ಅಧ್ಯಯನವನ್ನು ಉತ್ತೇಜಿಸುವುದು;

(ಬಿ) ಅಧ್ಯಯನ, ಸಂಶೋಧನೆ, ಚರ್ಚೆಗಳು, ಉಪನ್ಯಾಸ, ಅಭಿಪ್ರಾಯಗಳು ಮತ್ತು ಮಾಹಿತಿ ವಿನಿಮಯದಂಥ ಒಂದೇ ರೀತಿಯ ಚಟುವಟಿಕೆಗಳಲ್ಲಿ ತೊಡಗಿರುವ ಭಾರತದೊಳಗಿನ ಮತ್ತು ಹೊರಗಿನ ಇತರ ಸಂಸ್ಥೆಗಳೊಂದಿಗೆ ಮತ್ತು ರಾಷ್ಟ್ರಗಳೊಂದಿಗೆ ಭಾರತದ ಸಂಬಂಧಗಳನ್ನು ಉತ್ತೇಜಿಸುವುದು;

(ಸಿ) ಜಾಗತಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಮಾಹಿತಿ ಮತ್ತು ಜ್ಞಾನ ಪೂರೈಕೆ ಸಂಸ್ಥೆಯಂತೆ ಸೇವೆ ಸಲ್ಲಿಸುವುದು;

(ಡಿ) ಪುಸ್ತಕಗಳನ್ನು, ನಿಯತಕಾಲಿಕೆಗಳನ್ನು, ಪತ್ರಿಕೆಗಳನ್ನು, ವಿಮರ್ಶೆಗಳನ್ನು, ಪ್ರಬಂಧಗಳನ್ನು, ಕಿರುಹೊತ್ತಿಗೆಗಳನ್ನು ಮತ್ತು (ಎ) ಮತ್ತು (ಬಿ) ಖಂಡಗಳಲ್ಲಿ ಒಳಗೊಂಡಿರುವ ವಿಷಯಗಳ ಮೇಲಿನ ಇತರ ಸಾಹಿತ್ಯವನ್ನು ಪ್ರಕಟಿಸುವುದು;

(ಇ) ಈ ಪ್ರಕರಣದಲ್ಲಿ ನಮೂದಿಸಲಾಗಿರುವ ಉದ್ದೇಶಗಳನ್ನು ಉತ್ತೇಜಿಸುವ ಸಂಸ್ಥೆಗಳೊಂದಿಗೆ ಸಂಪರ್ಕ ಸ್ಥಾಪಿಸುವುದು;

(ಎಫ್) ಅಂತರರಾಷ್ಟ್ರೀಯ ವ್ಯವಹಾರಗಳ ಬಗ್ಗೆ ಭಾರತದ ನೀತಿಯನ್ನು ಚರ್ಚಿಸಲು ಅಥವಾ ಅಧ್ಯಯನ ಮಾಡಲು ಸಮ್ಮೇಳನಗಳನ್ನು ಮತ್ತು ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು; ಮತ್ತು

(ಜಿ) ವಿಚಾರಗಳನ್ನು ಉತ್ತೇಜಿಸಲು ಮತ್ತು ಮೇಲೆ ಉಲ್ಲೇಖಿಸಿದ ಉದ್ದೇಶಗಳನ್ನು ಸಾಧಿಸಲು ಅಂತಹ ಇತರ ಚಟುವಟಿಕೆಗಳನ್ನು ಕೈಗೊಳ್ಳುವುದು

– ಇವು ಪರಿಷತ್ತಿನ ಉದ್ದೇಶಗಳಾಗಿರತಕ್ಕದ್ದು.

14. **ಪರಿಷತ್ತಿನ ಆಡಳಿತ ಮಂಡಳಿ ಮತ್ತು ಇತರ ಸಮಿತಿಗಳು.**– (1) ಪರಿಷತ್ತಿಗೆ ಒಂದು ಆಡಳಿತ ಮಂಡಲಿ ಇರತಕ್ಕದ್ದು, ಇದನ್ನು ಪರಿಷತ್ತು ರಚಿಸತಕ್ಕದ್ದು.

(2) ಆಡಳಿತ ಮಂಡಳಿಯು ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಯಾಗಿರತಕ್ಕದ್ದು ಮತ್ತು ಪರಿಷತ್ತು, ಈ ಬಗ್ಗೆ ಮಾಡಿದ ವಿನಿಯಮನಗಳ ಮೂಲಕ, ಅದಕ್ಕೆ ಪ್ರದಾನ ಮಾಡಿದ ಅಥವಾ ವಿಧಿಸಿದ ಅಂತಹ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(3) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂತಹ ದಿನಾಂಕದಂದು ಮತ್ತು ದಿನಾಂಕದಿಂದ, ಭಾರತದ ಉಪರಾಷ್ಟ್ರಪತಿಯು ಆಡಳಿತ ಮಂಡಳಿಯ ಪದನಿಮಿತ್ತ ಸಭಾಪತಿಯಾಗಿರತಕ್ಕದ್ದು ಮತ್ತು ವಿನಿಯಮನಗಳ ಮೂಲಕ ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) ಆಡಳಿತ ಮಂಡಳಿಯು ತನ್ನ ಅಧಿಕಾರಗಳನ್ನು ಚಲಾಯಿಸಲು ಮತ್ತು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಆಡಳಿತ ಮಂಡಲಿಯ ಸದಸ್ಯರ ಪದಾವಧಿ ಮತ್ತು ಅದರ ಸದಸ್ಯರ ಪೈಕಿ ಖಾಲಿಸ್ಥಾನಗಳನ್ನು ಭರ್ತಿಮಾಡುವ ವಿಧಾನವು ವಿನಿಯಮನಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

(5) ಪರಿಷತ್ತು, ನಿಯಮಗಳ ಮೂಲಕ ನಿಯಮಿಸಬಹುದಾದಂಥ ನಿಯಂತ್ರಣಕ್ಕೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಪರಿಷತ್ತಿನ ಯಾವುದೇ ಅಧಿಕಾರವನ್ನು ಚಲಾಯಿಸಲು ಅಥವಾ ಯಾವುದೇ ಪ್ರಕಾರ್ಯವನ್ನು ನಿರ್ವಹಿಸಲು ಅಥವಾ ಪರಿಷತ್ತು ಉಲ್ಲೇಖಿಸಬಹುದಾದ ಯಾವುದೇ ವಿಷಯದ ಬಗ್ಗೆ ವಿಚಾರಣೆ ನಡೆಸಲು ಅಥವಾ ವರದಿ ಮಾಡಲು ಅಥವಾ ಸಲಹೆ ನೀಡಲು ಸೂಕ್ತವೆಂದು ತಾನು ಭಾವಿಸುವಷ್ಟು ಸಂಖ್ಯೆಯ ಸ್ಥಾಯೀ ಸಮಿತಿಗಳನ್ನು ಮತ್ತು ತಾತ್ಕಾಲಿಕ ಸಮಿತಿಗಳನ್ನು ರಚಿಸಬಹುದು.

(6) ಸಭಾಪತಿಯು ಮತ್ತು ಆಡಳಿತ ಮಂಡಳಿಯ ಅಥವಾ ಸ್ಥಾಯಿ ಸಮಿತಿಯ ಅಥವಾ ತಾತ್ಕಾಲಿಕ ಸಮಿತಿಯ ಸದಸ್ಯರು, ವಿನಿಯಮನಗಳ ಮೂಲಕ ನಿಯಮಿಸಬಹುದಾದಂತಹ ಭತ್ಯೆಗಳನ್ನು ಸ್ವೀಕರಿಸತಕ್ಕದ್ದು.

15. **ಪರಿಷತ್ತಿನ ಸಿಬ್ಬಂದಿ.**– (1) ಪರಿಷತ್ತಿಗೆ ಒಬ್ಬ ಮಹಾ ನಿರ್ದೇಶಕನು ಇರತಕ್ಕದ್ದು, ಆತನನ್ನು 7ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪರಿಷತ್ತು ರಚನೆಯಾಗುವುದಕ್ಕೆ ಮುಂಚೆ, ಆ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಚಿತವಾದ ಪರಿಷತ್ತು ನೇಮಕ ಮಾಡತಕ್ಕದ್ದು ಮತ್ತು ಆ ತರುವಾಯ 7ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ರಚಿತವಾದ ಪರಿಷತ್ತಿನ ಕಾಲಾವಧಿಯಲಿ, ಆ ಪರಿಷತ್ತು ನೇಮಕ ಮಾಡತಕ್ಕದ್ದು.

(1ಎ) (1)ನೇ ಉಪಪ್ರಕರಣದ ಮೇರೆಗಿನ ಮಹಾನಿರ್ದೇಶಕನ ಪ್ರತಿಯೊಂದು ನೇಮಕವನ್ನು, ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಮಂತ್ರಾಲಯವು ಶಿಫಾರಸು ಮಾಡಿದ ಕನಿಷ್ಠ ಪಕ್ಷ ಎರಡು ಹೆಸರುಗಳಿರುವ ಪಟ್ಟಿಯಿಂದ ಮಾಡತಕ್ಕದ್ದು.

(1ಬಿ) ಮಹಾ ನಿರ್ದೇಶಕನು ಪರಿಷತ್ತಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರತಕ್ಕದ್ದು.

(1ಸಿ) ಮಹಾ ನಿರ್ದೇಶಕನು ಕನಿಷ್ಠ ಪಕ್ಷ ಭಾರತ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ ದರ್ಜೆಗೆ ಸಮಾನವಾದ ದರ್ಜೆಯವನಾಗಿರತಕ್ಕದ್ದು ಮತ್ತು ಮೂರು ವರ್ಷಗಳನ್ನು ಮೀರದ ಅಧಿಕಾರಾವಧಿಯನ್ನು ಹೊಂದಿರತಕ್ಕದ್ದು.

(2) ಮಹಾ ನಿರ್ದೇಶಕನು ಪರಿಷತ್ತಿನ, ಅದರ ಆಡಳಿತ ಮಂಡಳಿಯ ಹಾಗೂ ಇತರ ನಿಕಾಯಗಳ ಮತ್ತು ಸಮಿತಿಗಳ ಪದನಿಮಿತ್ತ ಸದಸ್ಯ-ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸತಕ್ಕದ್ದು.

(3) ಮಹಾನಿರ್ದೇಶಕನು ವಿನಿಯಮನಗಳ ಮೂಲಕ ನಿಯಮಿಸಬಹುದಾದಂಥ ಅಥವಾ ಪರಿಷತ್ತು ಅಥವಾ ಅಧ್ಯಕ್ಷನು ಅಥವಾ ಆಡಳಿತ ಮಂಡಳಿಯು ಅಥವಾ ಸಭಾಪತಿಯು ಆತನಿಗೆ ಪ್ರತ್ಯಾಯೋಜಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) ವಿದೇಶ ವ್ಯವಹಾರಗಳ ಸಚಿವಾಲಯದ ಹಣಕಾಸು ಸಲಹೆಗಾರನು ಪರಿಷತ್ತಿನ ಹಣಕಾಸು ಸಲಹೆಗಾರನಾಗಿರತಕ್ಕದ್ದು.

(5) ಈ ಬಗ್ಗೆ ರಚಿಸಬಹುದಾದಂತಹ ನಿಯಮಗಳಿಗೆ ಒಳಪಟ್ಟು, ಪರಿಷತ್ತು, ತನ್ನ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ ಹಾಗೂ ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ಅವಶ್ಯವೆನಿಸಬಹುದಾದಂತಹ ಸಂಖ್ಯೆಯ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ನೇಮಕಮಾಡಬಹುದು ಮತ್ತು ಅಂತಹ ಇತರ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಪದನಾಮಗಳನ್ನು ಹಾಗೂ ಶ್ರೇಣಿಗಳನ್ನು ನಿರ್ಧರಿಸಬಹುದು.

(6) ಈ ಬಗ್ಗೆ ರಚಿಸಬಹುದಾದ ನಿಯಮಗಳಿಗೊಳಪಟ್ಟು ಪರಿಷತ್ತಿನ ಮಹಾನಿರ್ದೇಶಕನು ಮತ್ತು ಇತರ ಅಧಿಕಾರಿಗಳು ಮತ್ತು ನೌಕರರು ಈ ಬಗ್ಗೆ ರಚಿಸಿದ ವಿನಿಯಮನಗಳ ಮೂಲಕ ನಿಯಮಿಸಬಹುದಾದಂಥ ಸಂಬಳ ಮತ್ತು ಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು ಮತ್ತು ರಜೆ, ನಿವೃತ್ತಿ ವೇತನ, ಉಪಾದಾನ, ಭವಿಷ್ಯ ನಿಧಿ ಮತ್ತು ಇತರ ವಿಷಯಗಳಿಗೆ ಸಂಬಂಧಪಟ್ಟಂತೆ ನಿಯಮಿಸಬಹುದಾದಂಥ ಸೇವಾ ನಿಯಮಗಳ ಮೂಲಕ ನಿಯಂತ್ರಿತರಾಗತಕ್ಕದ್ದು.

**16. ಪರಿಷತ್ತಿನ ಪ್ರಕಾರ್ಯಗಳು.–** ಪರಿಷತ್ತು, 13ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪರಿಷತ್ತಿನ ಉದ್ದೇಶಗಳನ್ನು ಸಮರ್ಥವಾಗಿ ಸಾಧಿಸುವುದಕ್ಕಾಗಿ ವಿವಿಧ ಕಾರ್ಯಗಳನ್ನು ಹಮ್ಮಿಕೊಳ್ಳಲು, ಸಂಘಟಿಸಲು ಮತ್ತು ಜಾರಿಗೊಳಿಸಲು ವಿವಿಧ ಯೋಜನೆಗಳನ್ನು ಕೈಗೊಳ್ಳತಕ್ಕದ್ದು ಮತ್ತು ಕೇಂದ್ರ ಸರ್ಕಾರವು, ನಿಯಮಗಳ ಮೂಲಕ ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ಸಹ ನೆರವೇರಿಸತಕ್ಕದ್ದು.

**17. ಪರಿಷತ್ತಿಗೆ ಸಂದಾಯ.–** ಈ ಬಗ್ಗೆ ಸಂಸತ್ತು ಕಾನೂನಿನ ಮೂಲಕ ಮಾಡಿದ ಯುಕ್ತ ವಿನಿಯೋಗದ ನಂತರ, ಕೇಂದ್ರ ಸರ್ಕಾರವು ಈ ಅಧಿನಿಯಮದ ಮೇರೆಗೆ ಪರಿಷತ್ತಿನ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ ಮತ್ತು ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ಅವಶ್ಯವೆಂದು ಪರಿಗಣಿಸಬಹುದಾದಂತಹ ಮೊತ್ತಗಳನ್ನು ಪ್ರತಿ ಹಣಕಾಸು ವರ್ಷದಲ್ಲಿ ಪರಿಷತ್ತಿಗೆ ಸಂದಾಯ ಮಾಡಬಹುದು.

**18. ಪರಿಷತ್ತಿನ ನಿಧಿ.–** (1) ಪರಿಷತ್ತು ಒಂದು ನಿಧಿಯನ್ನು ನಿರ್ವಹಿಸಿಕೊಂಡು ಬರತಕ್ಕದ್ದು, ಇದಕ್ಕೆ,–

(ಎ) ಕೇಂದ್ರ ಸರ್ಕಾರದಿಂದ ಸ್ವೀಕರಿಸುವ ಎಲ್ಲಾ ಹಣವನ್ನು;

(ಬಿ) ಅನುದಾನಗಳು, ಕೊಡುಗೆಗಳು, ದೇಣಿಗೆಗಳು, ಉಪಕಾರಧನ, ಮರಣ ಶಾಸನ ದಾನದ ಅಥವಾ ವರ್ಗಾವಣೆಗಳ ಮೂಲಕ ಪರಿಷತ್ತು ಸ್ವೀಕರಿಸುವ ಎಲ್ಲಾ ಹಣವನ್ನು; ಮತ್ತು

(ಸಿ) ಯಾವುದೇ ಇತರ ರೀತಿಯಲ್ಲಿ ಅಥವಾ ಯಾವುದೇ ಇತರ ಮೂಲದಿಂದ ಪರಿಷತ್ತು ಸ್ವೀಕರಿಸುವ ಎಲ್ಲಾ ಹಣವನ್ನು

– ಜಮೆ ಮಾಡತಕ್ಕದ್ದು.

(2) ನಿಧಿಗೆ ಜಮೆಯಾದ ಎಲ್ಲಾ ಹಣವನ್ನು ಕೇಂದ್ರ ಸರ್ಕಾರದ ಅನುಮೋದನೆಗೊಳಪಟ್ಟು, ಪರಿಷತ್ತು ನಿರ್ಧರಿಸಬಹುದಾದಂತಹ ಬ್ಯಾಂಕುಗಳಲ್ಲಿ ಠೇವಣಿಯಿಡತಕ್ಕದ್ದು ಅಥವಾ ಹೂಡತಕ್ಕದ್ದು.

(3) 16ನೇ ಪ್ರಕರಣದ ಮೇರೆಗೆ ತನ್ನ ಅಧಿಕಾರಗಳನ್ನು ಚಲಾಯಿಸುವಲ್ಲಿ ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅಥವಾ ಅದರಲ್ಲಿ ಉಲ್ಲೇಖಿತವಾದ ಯಾವುದೇ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಕಾರ್ಯಕ್ಕೆ ಮಾಡುವ ವೆಚ್ಚಗಳೂ ಸೇರಿದಂತೆ, ಪರಿಷತ್ತಿನ ಆಡಳಿತಾತ್ಮಕ ಮತ್ತು ಇತರ ವೆಚ್ಚಗಳನ್ನು ಮಾಡಲು ನಿಧಿಯನ್ನು ಬಳಸತಕ್ಕದ್ದು.

**19. ಪರಿಷತ್ತಿನ ಆಯವ್ಯಯ.–** ಪರಿಷತ್ತು, ಪ್ರತಿವರ್ಷವೂ, ನಿಯಮಗಳ ಮೂಲಕ ನಿಯಮಿಸಬಹುದಾದಂತಹ ನಮೂನೆಯಲ್ಲಿ ಮತ್ತು ಕಾಲದಲ್ಲಿ, ಮುಂಬರುವ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ, ಪರಿಷತ್ತಿನ ಅಂದಾಜು ಸ್ವೀಕೃತಿ ಮತ್ತು ವೆಚ್ಚವನ್ನು ತೋರಿಸುವ ಆಯವ್ಯಯವನ್ನು ತಯಾರಿಸತಕ್ಕದ್ದು ಮತ್ತು ನಿಯಮಗಳ ಮೂಲಕ ನಿಯಮಿಸಬಹುದಾದಷ್ಟು ಸಂಖ್ಯೆಯ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**20. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** (1) ಪರಿಷತ್ತು, ಸೂಕ್ತ ಲೆಕ್ಕಪತ್ರಗಳನ್ನು ಮತ್ತು ಇತರ ಸಂಬಂಧಪಟ್ಟ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ಕೇಂದ್ರ ಸರ್ಕಾರವು, ನಿಯಮಗಳ ಮೂಲಕ ನಿಯಮಿಸಬಹುದಾದಂತಹ ನಮೂನೆಯಲ್ಲಿ ಮತ್ತು ಸರ್ಕಾರವು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನೊಡನೆ ಸಮಾಲೋಚಿಸಿ, ಹೊರಡಿಸಬಹುದಾದಂತಹ ಸಾಮಾನ್ಯ ನಿರ್ದೇಶನಗಳಿಗನುಸಾರವಾಗಿ ಜಮಾಖರ್ಚು ಪಟ್ಟಿಯನ್ನು ಒಳಗೊಂಡು ಲೆಕ್ಕಪತ್ರಗಳ ವಾರ್ಷಿಕ ವಿವರಪಟ್ಟಿಯನ್ನು ತಯಾರಿಸತಕ್ಕದ್ದು.

(2) ಪರಿಷತ್ತಿನ ಲೆಕ್ಕಪತ್ರಗಳನ್ನು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಲೆಕ್ಕ ಪರಿಶೋಧನೆ ಮಾಡತಕ್ಕದ್ದು ಮತ್ತು ಅಂತಹ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಆತನು ಭರಿಸಿದ ಯಾವುದೇ ವೆಚ್ಚವನ್ನು ಭಾರತದ ಲೆಕ್ಕ ನಿಯಂತ್ರಕನಿಗೆ ಮತ್ತು ಮಹಾಲೆಕ್ಕ ಪರಿಶೋಧಕನಿಗೆ ಪರಿಷತ್ತು ಸಂದಾಯ ಮಾಡತಕ್ಕದ್ದು.

(3) ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಮತ್ತು ಪರಿಷತ್ತಿನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಆತನಿಂದ ನೇಮಕಗೊಂಡ ಯಾವನೇ ವ್ಯಕ್ತಿಯು, ಸರ್ಕಾರಿ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನಿಗೆ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಇರುವಂಥವೇ ಹಕ್ಕುಗಳನ್ನು, ವಿಶೇಷಾಧಿಕಾರಗಳನ್ನು ಮತ್ತು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ, ಪರಿಷತ್ತಿನ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ಸಂಬಂಧಿಸಿದ ವೋಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಮತ್ತು ಕಾಗದಪತ್ರಗಳನ್ನು ಹಾಜರುಪಡಿಸುವಂತೆ ಕೇಳುವ ಮತ್ತು ಪರಿಷತ್ತಿನ ಕಚೇರಿಯನ್ನು ಅಥವಾ ಕಚೇರಿಗಳನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು ಅಥವಾ ಈ ಬಗ್ಗೆ ಆತನಿಂದ ನೇಮಕಗೊಂಡ ಯಾರೇ ಇತರ ವ್ಯಕ್ತಿಯು ಪ್ರಮಾಣೀಕರಿಸಿದಂಥ ಪರಿಷತ್ತಿನ ಲೆಕ್ಕಪತ್ರಗಳನ್ನು, ಅದರ ಮೇಲಿನ ಲೆಕ್ಕಪರಿಶೋಧನೆಯ ವರದಿಯೊಂದಿಗೆ, ಕೇಂದ್ರ ಸರ್ಕಾರಕ್ಕೆ ವರ್ಷವರ್ಷವೂ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕದ್ದು.

**21. ವಾರ್ಷಿಕ ವರದಿ.–** ಪರಿಷತ್ತು, ಪ್ರತಿವರ್ಷವೂ ಹಿಂದಿನ ವರ್ಷದ ತನ್ನ ಚಟುವಟಿಕೆಗಳ ಬಗ್ಗೆ ಕರಾರುವಾಕ್ಕಾದ ಮತ್ತು ಸಂಪೂರ್ಣವಾದ ವಿವರವನ್ನು ನೀಡುವ ವಾರ್ಷಿಕ ವರದಿಯನ್ನು ನಿಯಮಗಳ ಮೂಲಕ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂತಹ ಕಾಲದಲ್ಲಿ ತಯಾರಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕದ್ದು.

**22. ಪರಿಷತ್ತಿನ ಆದೇಶಗಳನ್ನು ಮತ್ತು ಲಿಖಿತಗಳನ್ನು ಅಧಿಪ್ರಮಾಣನಗೊಳಿಸುವುದು.–** ಪರಿಷತ್ತಿನ ಎಲ್ಲಾ ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಸಹಿಯಿಂದ ಅಧಿಪ್ರಮಾಣನಗೊಳಿಸತಕ್ಕದ್ದು ಮತ್ತು ಪರಿಷತ್ತು

ಹೊರಡಿಸುವ ಎಲ್ಲಾ ಇತರ ಲಿಖಿತಗಳನ್ನು ಮಹಾನಿರ್ದೇಶಕನ ಅಥವಾ ಈ ಬಗ್ಗೆ ಪರಿಷತ್ತಿನಿಂದ ಅಧಿಕೃತನಾದ ಪರಿಷತ್ತಿನ ಯಾರೇ ಇತರ ಅಧಿಕಾರಿಯ ಸಹಿಯ ಮೂಲಕ ಅಧಿಪ್ರಮಾಣನಗೊಳಿಸತಕ್ಕದ್ದು.

23. **ಖಾಲಿಸ್ಥಾನ, ಇತ್ಯಾದಿಗಳು, ಪರಿಷತ್ತಿನ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕದ್ದಲ್ಲ.**– ಈ ಅಧಿನಿಯಮದ ಮೇರೆಗೆ ಪರಿಷತ್ತಿನ ಆಡಳಿತ ಮಂಡಳಿಯ ಅಥವಾ ಯಾವುದೇ ಸ್ಥಾಯಿ ಅಥವಾ ತಾತ್ಕಾಲಿಕ ಸಮಿತಿಯ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು,–

(ಎ) ಪರಿಷತ್ತಿನಲ್ಲಿ ಯಾವುದೇ ಸ್ಥಾನ ಖಾಲಿ ಇರುವ ಅಥವಾ ಪರಿಷತ್ತಿನ ರಚನೆಯಲ್ಲಿನ ಯಾವುದೇ ನ್ಯೂನತೆಯ; ಅಥವಾ

(ಬಿ) ಪರಿಷತ್ತಿನ ಸದಸ್ಯನಾಗಿ ಕಾರ್ಯನಿರ್ವಹಿಸುವ ವ್ಯಕ್ತಿಯ ನೇಮಕದಲ್ಲಿನ ಯಾವುದೇ ನ್ಯೂನತೆಯ; ಅಥವಾ

(ಸಿ) ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದ ಪರಿಷತ್ತಿನ ಪ್ರಕ್ರಿಯೆಯಲ್ಲಿನ ಯಾವುದೇ ಕ್ರಮದೋಷದ

– ಕಾರಣಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

23ಎ. **ತಾತ್ಕಾಲಿಕ ಉಪಬಂಧಗಳು.**– ಸಂದೇಹಗಳ ನಿವಾರಣೆಗಾಗಿ, 7ನೇ ಪ್ರಕರಣದ (2)ನೇ ಉಪಪ್ರಕರಣಕ್ಕೆ ಅನುಸಾರವಾಗಿ ಪರಿಷತ್ತಿನ ರಚನೆಯಾಗುವವರೆಗೂ, ಈ ಅಧಿನಿಯಮದ ಯಾವುದೇ ಉಪಬಂಧದಲ್ಲಿ ತದ್ವಿರುದ್ಧವಾದುದು ಏನೇ ಒಳಗೊಂಡಿದ್ದರೂ, ಅದರ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪರಿಷತ್ತನ್ನೇ ಈ ಅಧಿನಿಯಮದ ಉದ್ದೇಶಗಳಿಗಾಗಿ ಪರಿಷತ್ತು ಎಂದು ಭಾವಿಸತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ:

ಪರಂತು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿತವಾದ ನಿಯಮಗಳ ಅಥವಾ ವಿನಿಯಮನಗಳ ಯಾವುದೇ ಉಪಬಂಧದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಅಥವಾ ಪ್ರಾರಂಭಿಸಿದ ಯಾವುದೇ ವ್ಯವಹರಣೆಗಳನ್ನು 7ನೇ ಪ್ರಕರಣದ (2)ನೇ ಉಪಪ್ರಕರಣದ ಪ್ರಕಾರ ಪರಿಷತ್ತು ಅಸ್ತಿತ್ವದಲ್ಲಿರದ ಕಾರಣದಿಂದ ಅದನ್ನು ಯಾವುದೇ ನ್ಯಾಯಾಲಯದ ಮುಂದೆ ಅಥವಾ ಇತರ ಪ್ರಾಧಿಕಾರದ ಮುಂದೆ ಪ್ರಶ್ನಿಸತಕ್ಕದ್ದಲ್ಲ.

24. **ವರದಿಗಳು, ವಿವರಪಟ್ಟಿಕೆಗಳು ಮತ್ತು ಮಾಹಿತಿ.**– ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ವರದಿಗಳನ್ನು, ವಿವರಪಟ್ಟಿಕೆಗಳನ್ನು ಮತ್ತು ಇತರ ಮಾಹಿತಿಯನ್ನು ಪರಿಷತ್ತು, ಆ ಸರ್ಕಾರಕ್ಕೆ ಒದಗಿಸತಕ್ಕದ್ದು.

25. **ನಿಯಮಗಳನ್ನು ರಚಿಸಲು ಅಧಿಕಾರ.**– (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ನಿರ್ದಿಷ್ಟವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) 8ನೇ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ಸದಸ್ಯರೊಳಗೆ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ವಿಧಾನ;

(ಬಿ) ಸಂದರ್ಭಾನುಸಾರ, 9ನೇ ಮತ್ತು 10ನೇ ಪ್ರಕರಣಗಳ ಮೇರೆಗೆ, ಅಧ್ಯಕ್ಷನು ಮತ್ತು ಉಪಾಧ್ಯಕ್ಷರುಗಳು ಚಲಾಯಿಸಬೇಕಾದ ಅಧಿಕಾರಗಳು ಮತ್ತು ನಿರ್ವಹಿಸಬೇಕಾದ ಪ್ರಕಾರ್ಯಗಳು;

(ಸಿ) 11ನೇ ಪ್ರಕರಣದ ಮೇರೆಗೆ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಡಿ) 14ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಸ್ಥಾಯಿ ಮತ್ತು ತಾತ್ಕಾಲಿಕ ಸಮಿತಿಗಳ ರಚನೆಗೆ ಸಂಬಂಧಿಸಿದಂತೆ ನಿಯಂತ್ರಣ ಮತ್ತು ನಿರ್ಬಂಧಗಳು;

(ಇ) 15ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಪರಿಷತ್ತಿಗೆ ನೇಮಕ ಮಾಡಬಹುದಾದ ಇತರ ಅಧಿಕಾರಿಗಳ ಮತ್ತು ನೌಕರರ ಸಂಖ್ಯೆ ಮತ್ತು ಅಂತಹ ನೇಮಕದ ವಿಧಾನ;

(ಎಫ್) 15ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಪರಿಷತ್ತಿನ ಮಹಾನಿರ್ದೇಶಕನಿಗೆ ಮತ್ತು ಇತರ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂದಾಯ ಮಾಡುವ ಸಂಬಳ ಮತ್ತು ಭತ್ಯೆಗಳು;

(ಜಿ) 16ನೇ ಪ್ರಕರಣದ ಮೇರೆಗೆ ಪರಿಷತ್ತು ನೆರವೇರಿಸಬೇಕಾದ ಅಂತಹ ಇತರ ಪ್ರಕಾರ್ಯಗಳು;

(ಹೆಚ್) 19ನೇ ಪ್ರಕರಣದ ಮೇರೆಗೆ ಪರಿಷತ್ತು, ಆಯವ್ಯಯವನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಕಾಲದಲ್ಲಿ ತಯಾರಿಸತಕ್ಕದ್ದೋ ಆ ನಮೂನೆ ಮತ್ತು ಆ ಕಾಲ ಮತ್ತು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕಾದ ಅದರ ಪ್ರತಿಗಳ ಸಂಖ್ಯೆ;

(ಐ) 20ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಜಮಾ-ಖರ್ಚು ಪಟ್ಟಿಯನ್ನು ಒಳಗೊಂಡಂತೆ ಪರಿಷತ್ತು ಯಾವ ನಮೂನೆಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಪಟ್ಟಿಕೆಯನ್ನು ತಯಾರಿಸತಕ್ಕದ್ದೋ ಆ ನಮೂನೆ;

(ಜೆ) 21ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರಕ್ಕೆ ಯಾವ ನಮೂನೆಯಲ್ಲಿ ಮತ್ತು ಯಾವ ಕಾಲದಲ್ಲಿ ಪರಿಷತ್ತಿನ ಚಟುವಟಿಕೆಗಳ ವಾರ್ಷಿಕ ವರದಿಯನ್ನು ಸಲ್ಲಿಸತಕ್ಕದ್ದೋ ಆ ನಮೂನೆ ಮತ್ತು ಆ ಕಾಲ;

(ಕೆ) ನಿಯಮಗಳ ಮೂಲಕ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

**26. ವಿನಿಯಮನಗಳನ್ನು ರಚಿಸಲು ಅಧಿಕಾರ.**- (1) ಪರಿಷತ್ತು, ಈ ಅಧಿನಿಯಮದ ಉಪಬಂಧಗಳಿಗೆ ಸುಸಂಗತವಾಗುವ ವಿನಿಯಮನಗಳನ್ನು ಹಾಗೂ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂತಹ ವಿನಿಯಮನಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:-

(ಎ) 12ನೇ ಪ್ರಕರಣದ ಮೇರೆಗೆ ಪರಿಷತ್ತಿನ ಮೊದಲ ಸಭೆಯನ್ನು ಹೊರತುಪಡಿಸಿ, ಸಭೆಗಳನ್ನು ಕರೆಯುವುದು ಮತ್ತು ನಡೆಸುವುದು, ಅಂತಹ ಸಭೆಗಳನ್ನು ಯಾವ ಕಾಲದಲ್ಲಿ ಮತ್ತು ಸ್ಥಳದಲ್ಲಿ ನಡೆಸಬೇಕಾಗಿರುವುದೋ ಆ ಕಾಲ ಮತ್ತು ಸ್ಥಳ ಮತ್ತು ಅಂತಹ ಸಭೆಗಳಲ್ಲಿನ ಕಾರ್ಯಕಲಾಪ;

(ಬಿ) 14ನೇ ಪ್ರಕರಣದ (2)ನೇ ಮತ್ತು (3)ನೇ ಉಪಪ್ರಕರಣಗಳ ಮೇರೆಗೆ ಆಡಳಿತ ಮಂಡಳಿಯು ಮತ್ತು ಸಭಾಪತಿಯು ಚಲಾಯಿಸಬೇಕಾದ ಅಧಿಕಾರಗಳು ಮತ್ತು ನಿರ್ವಹಿಸಬೇಕಾದ ಪ್ರಕಾರ್ಯಗಳು;

(ಸಿ) 14ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಆಡಳಿತ ಮಂಡಳಿಯು ತನ್ನ ಅಧಿಕಾರಗಳನ್ನು ಚಲಾಯಿಸಲು ಮತ್ತು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಆಡಳಿತ ಮಂಡಳಿಯ ಸದಸ್ಯರ ಪದಾವಧಿ ಮತ್ತು ಸದಸ್ಯರೊಳಗೆ ಖಾಲಿಸ್ಥಾನಗಳನ್ನು ಭರ್ತಿ ಮಾಡುವ ವಿಧಾನ;

(ಡಿ) 14ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಸಭಾಪತಿಗೆ ಮತ್ತು ಆಡಳಿತ ಮಂಡಳಿಯ, ಸ್ಥಾಯಿ ಮತ್ತು ತಾತ್ಕಾಲಿಕ ಸಮಿತಿಗಳ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಇ) 15ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಮಹಾನಿರ್ದೇಶಕನು ಚಲಾಯಿಸಬೇಕಾದ ಅಧಿಕಾರಗಳು ಮತ್ತು ನಿರ್ವಹಿಸಬೇಕಾದ ಪ್ರಕಾರ್ಯಗಳು;

(ಎಫ್) 15ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಪರಿಷತ್ತಿನ ಮಹಾನಿರ್ದೇಶಕನ ಮತ್ತು ಇತರ ಅಧಿಕಾರಿಗಳ ಹಾಗೂ ನೌಕರರ ಸೇವಾ ಷರತ್ತುಗಳು;

(ಜಿ) ವಿನಿಯಮನಗಳ ಮೂಲಕ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಮೊದಲನೆಯ ವಿನಿಯಮನಗಳನ್ನು ಆಡಳಿತ ಮಂಡಳಿಯು ರಚಿಸತಕ್ಕದ್ದು ಮತ್ತು ಹಾಗೆ ರಚಿಸಿದ ಯಾವುದೇ ವಿನಿಯಮನಗಳನ್ನು (1)ನೇ ಉಪಪ್ರಕರಣದ ಮೇರೆಗೆ ತನ್ನ ಅಧಿಕಾರಗಳನ್ನು ಚಲಾಯಿಸಿ ಪರಿಷತ್ತು ಬದಲಾಯಿಸಬಹುದು ಅಥವಾ ರದ್ದುಗೊಳಿಸಬಹುದು.

**27. ನಿಯಮಗಳನ್ನು ಹಾಗೂ ವಿನಿಯಮನಗಳನ್ನು ಸಂಸತ್ತಿನ ಮುಂದೆ ಇಡುವುದು.–** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಪ್ರತಿಯೊಂದು ವಿನಿಯಮನವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು, ಮತ್ತು ಅದನ್ನು ಹಾಗೆ ಮಂಡಿಸಲಾದ ಅಧಿವೇಶನದ ಅಥವಾ ಮೇಲೆ ಹೇಳಿದ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ವಿನಿಯಮನದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ವಿನಿಯಮನವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ವಿನಿಯಮನವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಅಥವಾ ವಿನಿಯಮನದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**28. ತೊಂದರೆಗಳನ್ನು ನಿವಾರಿಸುವ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಯನ್ನು ನಿವಾರಿಸಲು ಅವಶ್ಯವೆನಿಸಬಹುದಾದಂತೆ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷಗಳು ಮುಕ್ತಾಯವಾದ ನಂತರ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**28ಎ. ತೊಂದರೆಗಳನ್ನು ನಿವಾರಿಸುವ ಅಧಿಕಾರ.–** (1) ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು (ತಿದ್ದುಪಡಿ) ಅಧಿನಿಯಮ, 2003ರ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ಆದೇಶದ ಮೂಲಕ, ಆ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಆ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು (ತಿದ್ದುಪಡಿ) ಅಧಿನಿಯಮ, 2003 ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**29. ನಿರಸನ ಮತ್ತು ಉಳಿಸುವಿಕೆಗಳು.–** (1) ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು (ಎರಡನೇ) ಅಧ್ಯಾದೇಶ, 2001ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಸದರಿ ಅಧ್ಯಾದೇಶವನ್ನು ನಿರಸನಗೊಳಿಸಲಾಗಿದ್ದರೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

* * * * *